**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ**
**ಓ.ಎಸ್. ಸಂಖ್ಯೆ35 /2020**

**ದಿನಾಂಕ 20.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಿ.ಡಬ್ಲ್ಯೂ 1**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿಯ ಪರ ಶ್ರೀ.ಪಿ.ಎ.ಟಿ ವಕೀಲರಿಂದಃ**

ನನ್ನ ತಂದೆ ನನ್ನ ಹೆಸರಿಗೆ ಬರೆದು ಕೊಟ್ಟ ವಿಶೇಷ ಅಧಿಕಾರ ಪತ್ರವನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ವಂಶವೃಕ್ಷವನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸ.ನಂ.64 ಮತ್ತು 22 ರ ಎರಡು ಮೂಲ ದಾಖಲೆಗಳನ್ನು ಮತ್ತು ಸ.ನಂ.64 ರ ಇಂಡೆಕ್ಸ್ ಆಫ್ ಲ್ಯಾಂಡ್ಸ್ ದಾಖಲೆಗಳನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ನಿಪಿ-3 ರಿಂದ 6 ಎಂದು ಗುರುತಿಸಲಾಯಿತು. ದಿ.23.07.1955 ರ ಕ್ರಯ ಪತ್ರ ಹಾಜರು ಮಾಡಿದ್ದೇನೆ ಅದನ್ನು ನಿಪಿ-7 ಎಂದು ಗುರುತಿಸಲಾಯಿತು. 6 ಮುಟೇಶನ್ ಪ್ರತಿಗಳನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ನಿಪಿ-8 ರಿಂದ 13 ಎಂದು ಗುರುತಿಸಲಾಯಿತು. ಸ.ನಂ.64 ಖೇತುವಾರಿ ಹಾಜರು ಮಾಡಿದ್ದೇನೆ. ಅದನ್ನು ನಿಪಿ-14 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿನ ಒಟ್ಟು 31 ಪಹಣಿ ಪತ್ರಿಕೆಗಳನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ನಿಪಿ-15 ರಿಂದ 45 ಎಂದು ಗುರುತಿಸಲಾಯಿತು. ಆರ್.ಆರ್. 307 ನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ-46 ಎಂದು ಗುರುತಿಸಲಾಯಿತು. ಮೂರು ಮುಟೇಶನ್ ಗಳನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ನಿಪಿ-47 ರಿಂದ 49 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿನ 35 ಪಹಣಿ ಪತ್ರಿಕೆಗಳನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ನಿಪಿ-50 ರಿಂದ 84 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದು, ಆಲಿಸಿ, ಮುಂದೂಡಲಾಯಿತು.)**

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ